# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190–ಮಂಗಮ್ಮನಪಾಳ್ಯ

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 10.12.2021 ರಂದು ಬೆಳಿಗ್ಗೆ 11.30 ಘಂಟೆಗೆ Ward ಸಮಿತಿ ಸಭೆಯನ್ನು 190–ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ)ರಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು/ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಸ.ಕಾ.ಅ.) |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 |
| 3 | ಶ್ರೀ ಉಮೇಶ್.ಎಸ್ | ಸದಸ್ಯರು |
| 4 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು |
| 5 | ಶ್ರೀ ಗೋಪಿನಾಥ | ಸದಸ್ಯರು |
| 6 | ಶ್ರೀ ಎನ್.ಜೆ. ಮ್ಯಾಥ್ಯೂ | ಸಾರ್ವಜನಿಕರು |
| 7 | ಮೀರಾ | ಸಾರ್ವಜನಿಕರು |
| 8 | ಡಾ॥ ಯೋಗೇಶ್ | ಪ್ರಾ.ಆ.ಕೇಂ (ವೈದ್ಯಾಧಿಕಾರಿ) |
| 9 | ಡಾ॥ ಮಾಧವಿ | ಪ್ರಾ.ಆ.ಕೇಂ (ವೈದ್ಯಾಧಿಕಾರಿ) |
| 10 | ಶ್ರೀ ಸಾಯಿಬಣ್ಣ ಎಸ್.ಎನ್. | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 11 | ಶ್ರೀ ರಮೇಶ್ ಡಿ. | ಸಹಾಯಕ ಅಭಿಯಂತರರು, (ವಿದ್ಯುತ್ ವಿಭಾಗ) |
| 12 | ಶ್ರೀ ಹೆಚ್.ಆರ್. ಹರೀಶ್ | ಅರಣ್ಯ ವಲಯ ಅಧಿಕಾರಿ (ಬೊ.ವ.) |
| 13 | ಶ್ರೀ ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 14 | ಶ್ರೀ ರಾಮಚಂದ್ರ | ಸಹಾಯಕ ಕಂದಾಯ ಅಧಿಕಾರಿಗಳು (ಹೆಚ್.ಎಸ್.ಆರ್ ಉಪವಿಭಾಗ) |
| 15 | ಶ್ರೀ ಹೆಚ್. ನರಸಪ್ಪ | ತೋಟಗಾರಿಕೆ ಸಹಾಯಕರು |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

- **ಆರೋಗ್ಯ ಇಲಾಖೆ**

1. ವಾರ್ಡ್ ಕಮಿಟಿ ಸದಸ್ಯರಾದ ಶ್ರೀ ಉಮೇಶ್ ಮತ್ತು ಸುರೇಶ್ ರೆಡ್ಡಿ ರವರು ನಕಲಿ ವೈದ್ಯರ ಮೇಲೆ ಕ್ರಮ ವಹಿಸಿರುವ ಬಗ್ಗೆ ಪ್ರಸ್ತಾಪಸಿಸಿದರು ಹಾಗೂ ಈ ನಕಲಿ ವೈದ್ಯರ ಬಗ್ಗೆ ಗಂಭೀರವಾದ ಕ್ರಮ ಕೈಗೊಳ್ಳಲು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ವೈದ್ಯರು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ಈ ನಕಲಿ ವೈದ್ಯರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲುವುದಾಗಿ ತಿಳಿಸಿದರು.
2. ನೋಡಲ್ ಅಧಿಕಾರಿಗಳು ಲಸಿಕೆಯ ಪ್ರಗತಿ, ಒಮಿಕ್ರಾನ್ ಮತ್ತು ಕೋವಿಡ್ ಸಾವಿನ ಬಗ್ಗೆ ಪ್ರಸ್ತಾಪಿಸಿದರು ಹಿರಿಯ ಆರೋಗ್ಯ ಪರಿವೀಕ್ಷಕರು ಲಸಿಕಾ ಕಾರ್ಯಕ್ರಮ ಉತ್ತಮವಾಗಿ ಸಾಗುತ್ತಿದ್ದು, ಇದುವರೆಗೂ ಗರಿಷ್ಠ ಮಟ್ಟದಲ್ಲಿ ಹಾಕಲಾಗಿದೆ ಕೋವಿಡ್ ಸೋಂಕಿನಿಂದ ವಾರ್ಡ್ ವ್ಯಾಪ್ತಿಯಲ್ಲಿ ಇದುವರೆವಿಗೂ 52 ಜನ ಸಾವನ್ನಪ್ಪಿದಾರೆ ಹಾಗೂ 52ರ ಪೈಕಿ 30 ಕುಟುಂಬಗಳಿಗೆ ಪರಿಹಾರ ಸದ್ಯದಲ್ಲೇ ನೀಡಲಾಗುವುದು ಉಳಿದ 22 ಕುಟುಂಬಳಿಗೆ ದಿನಾಂಕ: 22.12.2021ರ ಒಳಗೆ ಪರಿಹಾರ ನೀಡಲಾಗುವುದೆಂದು ಸಭೆಗೆ ತಿಳಿಸಿದರು.

Scanned with

3. ಶ್ರೀ ಸುರೇಶ್ ರೆಡ್ಡಿ ರುವರು ಲಕ್ಷ್ಮೀ ಬಡಾವಣೆ ಅಂಜನೇಯ ಸ್ವಾಮಿ ದೇವಸ್ಥಾನದ ರಸ್ತೆ ಬದಿಗಳಲ್ಲಿ ಚಿಕನ್ ಕಬಾಬ್ ಅಂಗಡಿಗಳು ಹೆಚ್ಚಾಗುತ್ತಿರುವುದು ಕಂಡು ಬಂದಿದ್ದು, ಇದನ್ನು ತೆರವುಗೊಳಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಇಲಾಖೆಯಿಂದ Food Safety ಆಹಾರವನ್ನು ಪರಿಶೀಲಿಸಿ ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
4. ವಾರ್ಡ್ ವ್ಯಾಪ್ತಿಯ ಕೆಲವು ಜಾಗಗಳಲ್ಲಿ ಖಾಸಗಿ ಆಸ್ಪತ್ರೆಗಳು Bio Waste ನ್ನು (ಜೈವಿಕ ತ್ಯಾಜ್ಯ) ಅಲ್ಲಲ್ಲಿ ಬಿಸಾಡುತ್ತಿದ್ದು, ಇದು ತುಂಬಾ ಗಂಭೀರವಾದ ಅಪಾಯವಾಗುತ್ತಿದ್ದು . ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕಾರವಾಗುವ ಸಾಧ್ಯತೆ ಇರುತ್ತದೆ ಎಂದು ಸದಸ್ಯರುಗಳಾದ ಶ್ರೀ ಉಮೇಶ್ ಮತ್ತು ಮ್ಯಾಥ್ಯೂ ರವರು ಸಭೆಗೆ ತಿಳಿಸಿದರು ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಕೂಡಲೇ ಕ್ರಮ ಕೈಗೊಳ್ಳಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

- **ಬೀದಿ ದೀಪ**

1. ಹಿಂದಿನ ಸಭೆಗಳಲ್ಲಿ ಚರ್ಚಿಸಿದಂತೆ ಬೀದಿ ದೀಪಗಳಿಗೆ ಟೈಮರ್ಸ್ ಅನ್ನು ಅವಡಿಸುವಂತೆ ತಿಳಿಸಿದರೂ ಸಹ ಇದುವರೆಗೂ ಅಳವಡಿಸಿಲ್ಲ ಎಂದು ಸದಸ್ಯರಾದ ಶ್ರೀ ಉಮೇಶ್ ಹಾಗೂ ಶ್ರೀ ಗೋಪಿನಾಥ ಹಾಗೂ ಎಲ್ಲಾ ಸದಸ್ಯರು ಪ್ರಸ್ತಾಪಿಸಿದರು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು. ಬಿಬಿಎಂಪಿ ವಿದ್ಯುತ್ ರವರು ಅನುದಾನದ ಕೊರತೆ ಇರುವುದರಿಂದ ದೀಪಗಳಿಗೆ ಟೈಮರ್ಸ್ ಅಳವಡಿಸಲು ಸಾಧ್ಯವಾಗಿಲ್ಲ ನವ ನಗರೋತ್ಥಾನ ಮುಂದಿನ ಯೋಜನೆಯಡಿಯಲ್ಲಿ ಕನಿಷ್ಠ 10.00 ಲಕ್ಷಗಳ ಅನುದಾನವನ್ನು ಕ್ರಿಯಾಯೋಜನೆ ಪಟ್ಟಿಯಲ್ಲಿ ಸೇರಿಸಲು ಸದರಿ ಅಭಿಯಂತರರು. ಕೋರಿದ್ದು, ಇದಕ್ಕೆ ಕೂಡಲೇ ಕ್ರಿಯಾಯೋಜನೆಯಲ್ಲಿ ಸೇರಿಸಿ ಅನುವು ಮಾಡಲು ಹಾಜರಿದ್ದ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು. ಹೊಸ ವಿದ್ಯುತ್ ದೀಪಗಳನ್ನು ಅಳವಡಿಸಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಂತಿಮವಾದ ನಂತರ ಹೊಸ ವಿದ್ಯುತ್ ದೀಪಗಳನ್ನು ಎರಡು-ಮೂರು ತಿಂಗಳಲ್ಲಿ ಅಳವಡಿಸಲಾಗುವುದೆಂದು ಸಭೆಗೆ ಹಾಜರಿದ್ದ ಅಭಿಯಂತರರು ತಿಳಿಸಿದರು.

- **ಕಂದಾಯ**

1. ಬಿ ಖಾತಾ ಹೊಂದಿರುವ ಕಟ್ಟಡಗಳಿಗೆ ಹಾಗೂ ಪ್ರಸ್ತುತ ಕಟ್ಟಡದ ಕಾಮಗಾರಿಗಳು ಪ್ರಗತಿಯಲ್ಲಿರುವ ಕಟ್ಟಡಗಳಿಗೂ ಈಗಾಗಲೇ ನ್ಯಾಯಾಲಯದ ಆದೇಶದಂತೆ ನೋಟಿಸ್ ಜಾರಿ ಮಾಡಿ ಕ್ರಮ ಕೈಗೊಳ್ಳಲು ಆದೇಶಿಸಿರುವುದರಿಂದ ಜಂಟಿಯಗಿ ತಪಾಸಣೆ ಮಾಡಿ ಕ್ರಮ ಕೈಗೊಳ್ಳಲು ಈಗಾಗಲೇ ಸಹ ಕಂದಾಯ ಅಧಿಕಾರಿಗಳಿಗೆ ಪತ್ರ ಮುಖೇನ ಕೋರಲಾಗಿತ್ತು. ಈ ವಿಷಯವನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ಸದಸ್ಯರುಗಳ ಗಮನಕ್ಕೆ ತರಲಾಗಿದೆ ಕಟ್ಟಡದ ಮಾಲೀಕರ ಹೆಸರುಗಳು & ವಿಳಾಸ ಅಪೂರ್ಣವಾಗಿದ್ದು ನೋಟಿಸ್ ಜಾರಿ ಮಾಡಲು ಅಭಿಯಂತರರುಗೆ ಕಷ್ಟವಾಗಿದ್ದು, ನೋಟಿಸ್ ಜಾರಿ ಮಾಡಲು ವಿಳಂಬವಾಗಿರುತ್ತದೆ ಈ ಬಗ್ಗೆ ಮೇಲಾಧಿಕಾರಿಗಳು ಉಚ್ಚನ್ಯಾಯಾಲಯಕ್ಕೆ ಮಾಹಿತಿ ನೀಡಲು ಆಗದೆ ಇರುವುದರಿಂದ ಆಕ್ಷೇಪಿಸಿರುತ್ತಾರೆ. ಕೂಡಲೇ ಕಂದಾಯ ಇಲಾಖೆಯ ಸಹ ಕಂದಾಯ ಅಧಿಕಾರಿಗಳು/ಸಿಬ್ಬಂದಿ ವಾರ್ಡ್ ಅಭಿಯಂರೊಡನೆ ಜಂಟಿ ಸ್ಥಳ ಪರಿವೀಕ್ಷಣೆ ಮಾಡಿ ಸಹಕರಿಸಲು ಎಲ್ಲಾ ಸದಸ್ಯರುಗಳು ಸೂಚಿಸಿದ್ದು, ಇದಕ್ಕೆ ಕೂಡಲೇ ಸಹಕರಿಸುವುದಾಗಿ ಸಹ ಕಂದಾಯ ಅಧಿಕಾರಿಗಳು ಸಭೆಗೆ ತಿಳಿಸಿದರು.
2. ಮತದಾರರ ಪಟ್ಟಿಯಲ್ಲಿ ಆನ್‌ಲೈನ್ ಮುಖಾಂತರ ಮಾತ್ರ ಸೇರಲು ಅವಕಾಶ ಇರುವುದರಿಂದ ಕಂದಾಯ ಅಧಿಕಾರಿಗಳು ತಿಳಿಸಿರುತ್ತಾರೆ. ಇದಕ್ಕೆ ಪರ್ಯಾಯ ಏನು ಎಂದು ಸದಸ್ಯರಾದ ಶ್ರೀ ಉಮೇಶ್ ರವರು ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿ ರವರನ್ನು ಕೇಳಿದರು ಇದಕ್ಕೆ ಸಹಾಯಕ ಕಂದಾಯ ಅಧಿಕಾರಿ ರವರು ಎನ್.ವಿ.ಎಸ್.ಪಿ. ಆಪ್ ಮೂಲಕ ಮತದಾರರ ಪಟ್ಟಿಗೆ ನೋದಣಿ ಮಾಡಿಕೊಳ್ಳಬಹುದು ಇದಕ್ಕಾಗಿ ವಾರ್ಡ್‌ನಲ್ಲಿ ಮೂವರಿಗೆ ತರಬೇತಿ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ.**

1. ಸೋಮಸುಂದರ ಪಾಳ್ಯ ಕೆರೆಯ ಸುತ್ತಮುತ್ತಲಿನ ರಸ್ತೆಗಳ ತಿರುವುಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಪೈಪ್‌ಲೈನ್ ಕಾಮಗಾರಿ ಮಾಡಲಾಗಿದ್ದು, ಸಮರ್ಪಕವಾಗಿ ಘಟನೆ ಮಾಡದೆ ಅಗೆದ ಮಣ್ಣು ರಸ್ತೆಲ್ಲಿ ಬಿಟ್ಟಿರುವುದರಿಂದ ಹಾಗೂ ಮ್ಯಾನ್‌ಹೋಲ್‌ಗಳಲ್ಲಿ ಹೂಳುತುಂಬಿ ಕೊಳಚೆ ನೀರು ಸರಾಗವಾಗಿ ಹರಿಯದೆ ರಸ್ತೆಯ ಮೇಲ್ಭಾಗದಲ್ಲಿ ಹರಿಯುತ್ತಿದ್ದು, ಒಳಚರಂಡಿಗಳಲ್ಲಿ ನೀರು ಹರಿಯದೆ ರಸ್ತೆಯ ಬದಿ ಚರಂಡಿಗಳಿಗೆ ಬಿಟ್ಟಿರುವುದು ಕಂಡು ಬಂದಿರುತ್ತದೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬಿಳುವ ಸಾಧ್ಯತೆ ಇದ್ದು, ಸಾಕಷ್ಟು ಬಾರಿ ಎಚ್ಚರಿಸಿದರೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸ.ಕಾ.ಅ. ಮತ್ತು ಸ.ಅ. ನಿರ್ಲಕ್ಷ್ಯ ತೋರುತ್ತಿರುವುದು ಸಭೆಯ ಎಲ್ಲಾ ಸದಸ್ಯರು ಆಕ್ಷೇಪಿಸಿರುತ್ತಾರೆ.

Scanned with

ಇದಕ್ಕೆ ಎಲ್ಲಾ ಸದಸ್ಯರು ಸುಳ್ಳು ಆಸವಾಸನೆ ನೀಡುತ್ತಾರೆ ಯಾವುದೇ ಕೆಲಸ ಮಾಡುವುದಿಲ್ಲವೆಂದು ಹಾಜರಿದ್ದ ಸಹಾಯಕ ಅಭಿಯಂತರರಿಗೆ ಸುಳ್ಳು ಆಸವಾಸನೆ ನೀಡದಂತೆ ಎಲ್ಲಾ ಸದಸ್ಯರು ಎಚ್ಚರಿಸಿದರೂ. ಕೂಡಲೇ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರು ರವರಿಗೆ ಸೂಚಿಸಿದರು.

- ಸಂಚಾರಿ (ಟ್ರಾಫಿಕ್)

1. ಸಂಚಾರಿ ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಿಲ್ಲದ ಕಾರಣ ವಾರ್ಡ್ ಸಮಿತಿ ಸದಸ್ಯರು ಸದರಿ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಜಾರಿ ಮಾಡಲು ಸಭೆಗೆ ತಿಳಿಸಿದರು.
   ಈ ಮಧ್ಯೆ ಸಂಚಾರಿ ಇಲಾಖೆಯ ಅಧಿಕಾರಿಗಳು ಬಹುತೇಕ ಸಭೆಗೆ ಗೈರು ಹಾಜರಾಗುತ್ತಿದ್ದು. ಇವರ ಬಗ್ಗೆ ಕ್ರಮ ಕೈಗೊಳ್ಳಲು ಸಹಾಯಕ ಪೋಲಿಸ್ ಕಮಿಷನರ್, ಉಪ ಪೋಲಿಸ್ ಕಮಿಷನರ್ ಪೋಲಿಸ್ (ಸಂಚಾರಿ) ರವರಿಗೆ ಕೋರಲು ಎಲ್ಲಾ ಸದಸ್ಯರು ಕೋರಿದರು. ಇದಕ್ಕೆ ಕಾರಣ ಕೇಳಿ ನೋಟಿಸ್ ನೀಡಲು ಕಾರ್ಯದರ್ಶಿ (ಸಹಾಯಕ ಅಭಿಯಂತರರು) ರವರಿಗೆ ನೋಡಲ್ / ಅಧಿಕಾರಿ ರವರು ಸೂಚಿಸಿದರು. ಅಲ್ಲದೆ ಪೋಲಿಸ್ ಅಧಿಕಾರಿಗಳು ಸಹ ಸಭೆಗೆ ಗೈರು ಹಾಜರಾಗುತ್ತಿದ್ದು ಮೇಲಾಧಿಕಾರಿಗಳಿಗೆ ಸೂಚಿಸುವಂತೆ ಸಭೆಯಲ್ಲಿ ಎಲ್ಲಾ ಸದಸ್ಯರು ಸೂಚಿಸಿದರು. ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು. ರಸ್ತೆ ಮಧ್ಯ ಭಾಗಗಳಲ್ಲಿ ಅವೈಜ್ಞಾನಿಕ ರಸ್ತೆ ಹುಬ್ಬುಗಳಿದ್ದು. ಇದು ಸಂಚಾರಕ್ಕೆ ಅಡಚಣೆಯಾಗುತ್ತಿದ್ದು. ಕೂಡಲೇ ತೆರವುಗೊಳಿಸುವಂತೆ ಸದಸ್ಯರಾದ ಶ್ರೀ ಮ್ಯಾಥ್ಯೂ ಮತ್ತು ಶ್ರೀ ಉಮೇಶ್ ರವರು ಸಭೆಗೆ ಕೋರಿದರು. ಹಾಗೂ ನಾಗಾರ್ಜುನ ಅಪಾರ್ಟಮೆಂಟ್ ಹತ್ತಿರ ರಸ್ತೆ ಹುಬ್ಬುಗಳನ್ನು ಅಳವಡಿಸಿ ವೇಗವಾಗಿ ಬರುವ ವಾಹನಗಳನ್ನು ನಿಯಂತ್ರಿಸಿ ಸುರಕ್ಷಾ ಕ್ರಮವಾಗಿ ಮೀರಾ ಅವರು ಕೋರಿದ್ದು, ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿ ಸೂಚಿಸಿದರು. ಮತ್ತು ವಾರ್ಡ್ ವ್ಯಾಪ್ತಿಯಲ್ಲಿ ಗುಜರಿ ಅಂಗಡಿಗಳು ಹೆಚ್ಚಾಗುತ್ತಿದ್ದು, ಪಾದಚಾರಿ ಮಾರ್ಗದ ಮೇಲೆ ಹಾಕಿರುವುದರಿಂದ ಪಾದಚಾರಿಗಳಿಗೆ ಅಡಚಣೆಯಾಗದಂತೆ ಮಾಡಲು ಕೋರಿದರು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಸೂಚಿಸಿದರು.

- ಕೆರೆ ವಿಭಾಗ

1. ದಾಖಲೆಗಳ ಪ್ರಕಾರ ಸೋಮಸುಂದರ ಪಾಳ್ಯ ಜಾವೃತ ಪ್ರದೇಶವು 16.29 ಎಕರೆ ವಿಸ್ತೀರ್ಣದಷ್ಟುವಿದ್ದು, ಸುಮಾರು 4.00 ರಿಂದ 5 ಎಕರೆ ವಿಸ್ತೀರ್ಣವನ್ನು ಒತ್ತುವರಿಯಾಗಿರುತ್ತದೆ ಎಂದು ಸದಸ್ಯರಾದ ಶ್ರೀ ಉಮೇಶ್, ಶ್ರೀ ಸುರೇಶ್ ರವರು ಕೆರೆ ವಿಭಾಗ ಅಭಿಯಂತರಿಗೆ ಪ್ರಶ್ನಿಸಲಾಗಿದ್ದು 16.29 ಪೈಕಿ 4.00 ಎಕರೆ ಕೆ.ಸಿ.ಡಿ.ಸಿ ಸೇರಿದೆ ಒತ್ತುವರಿಯಾಗಿರುವ ನಕಾಶೆಯನ್ನು ತರಿಸಿ ಒತ್ತುವರಿಯಾಗಿರುವ ಬಗ್ಗೆ ನಿಖರವಾದ ಮಾಹಿತಿಯನ್ನು ಸಭೆಗೆ ನೀಡುವುದಾಗಿ ಸಹಾಯಕ ಅಭಿಯಂತರರು ತಿಳಿಸಿದರು ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ ಪುನರ್ ಸರ್ವೆ ಮಾಡಿ ಒತ್ತುವನ್ನು ಪತ್ತೆ ಮಾಡಿ ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.
2. ಮಂಗಮ್ಮನಪಾಳ್ಯ ಕೆರೆಗೆ ಕೊಳಚೆ ನೀರು ಬರುತ್ತಿದ್ದೆ ದುರ್ವಾಸನೆ ಬರುತ್ತಿದ್ದು. ಈ ಬಗ್ಗೆ ಕ್ರಮ ಕೈಗೊಂಡಿಲ್ಲವೆಂದು ಸಭೆಯ ಸದಸ್ಯರು ಆಕ್ಷೇಪಿಸಿದ್ದು. ಇದಕ್ಕೆ ಬಿಡಬ್ಲ್ಯೂ.ಎಸ್.ಎಸ್.ಬಿ ರವರು ಅನಧಿಕೃತವಾಗಿ ಕೊಳಚೆ ನೀರು ಬಿಡುತ್ತಿದ್ದು, ಒಳಚರಂಡಿ ಮಾರ್ಗ ಇಲ್ಲದೆ ಸಮಸ್ಯೆ ಉಂಟಾಗಿದೆ ಇದನ್ನು ಸರಿಯಪಡಿಸಲು ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಕೆರೆ ವಿಭಾಗ ಅಭಿಯಂತರರು ಕೋರಿದರು. ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಆಕ್ಷೇಪಿಸಿ ಕೂಡಲೇ ಮುಂದಿನ ವಾರದೊಳಗೆ ಪೈಪ್‌ಲೈನ್ ಅಳವಡಿಸಿ ಕೊಳಚೆ ನೀರು ಕೆರೆಯ ಅಂಗಲಕ್ಕೆ ಸೇರದಂತೆ ಕ್ರಮವಹಿಸಲು ಸೂಚಿಸಿದರು.

ಗಾರ್ವೆಭಾವಿಪಾಳ್ಯ ಕೆರೆ ಅಂಗಲದ ತುಂಬ ಜೆಂಡುಗಿಡಗಳು ಬೆಳೆದು ಇದರ ಹೂಗಳು ಗಾಳಿಗೆ ತೆಲಾಡಿ ಮನುಷ್ಯರ ಕಣ್ಣುಗಳಿಗೆ ಮತ್ತು ಮನೆಯೊಳಗೆ ಹೋಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುವ ಸಾಧ್ಯತೆ ಇರುತ್ತದೆ ಕೂಡಲೇ ತೆರವುಗೊಳಿಸುವಂತೆ ಸಹಾಯಕ ಅಭಿಯಂತರಿಗೆ ತಿಳಿಸಿದರು ಹಾಗೂ ಬಫರ್ ಜೋನ್‌ನಲ್ಲಿ ಒತ್ತುವರಿ ಮಾಡಿಕೊಂಡಿರುವರಿಗೆ ನೋಟಿಸ್ ಜಾರಿ ಮಾಡುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

Scanned with

- **ಪಶುಸಂಗೋಪನೆ**

1. ಸ್ಮಶಾನದ ಹತ್ತಿರ ಸರ್ವೆ ಸಂಖ್ಯೆ: 46 ಅಥವಾ 47 ರಲ್ಲಿ 10.00 ಗುಂಟೆ ಜಮೀನು ಇದ್ದು ಅದನ್ನು ನಾಯಿಗಲಿಗೆ ಲಸಿಕೆ ಮತ್ತು ಶಸ್ತ್ರ ಚಿಕಿತ್ಸೆ ಮಾಡಲು ಹಾಗೂ ಮಾಡಿದ ನಂತರ 8 ದಿನಗಳ ಕಾಲ ನಾಯಿಗಳಿಗೆ ವಿಶ್ರಾಂತಿ ನೀಡಲು ಆ ಜಾಗವನ್ನು ಉಪಯೋಗಿಸಿಕೊಳ್ಳಬಹುದು ಎಂದು ಸಹಾಯಕ ಕಂದಾಯ ಅಧಿಕಾರಿಗಳ ರವರು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಪಶುಸಂಗೋಪನೆ ಅಧಿಕಾರಿಗಳು ಇಂತಹ ಜಾಗವು ಹೊರವಲಯದಲ್ಲಿರ ಬೇಕೆ ಎಂದು ಸಭೆಗೆ ತಿಳಿಸಿದರು.

ವಾರ್ಡ್ ಸಂಖ್ಯೆ: 190 ಮಂಗಮ್ಮನಪಾಳ್ಯದ 2021-22ನೇ ಸಾಲಿನ ಕ್ರಿಯಾಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಬೇಕಾಗಿರುವ ಕಾಮಗಾರಿ ಪಟ್ಟಿಯನ್ನು ಅನುಮೋದಿಸಿ ಸದರಿ ಪಟ್ಟಿಯನ್ನು ಈ ನಡುವಳಿಯಲ್ಲಿ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.190
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ 10/12/2021
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಆಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಆಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಆಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with